

# ಹೋಂ ಥಿಯೇಟರ್

## ಫಸ್ಟ್ ಡೇ ಫಸ್ಟ್ ಶೋ

ಪ್ರತಿ ಶುಕ್ರವಾರ ಚಿತ್ರಮಂದಿರಗಳಲ್ಲಿ ಹೊಸ ಸಿನಿಮಾ ತೆರೆಕಾಣುವ ದಿನ. ಚಿತ್ರರಸಿಕರ ಪಾಲಿಗೆ ಹೊಸ ಕನಸು ಸಾಕಾರಗೊಳ್ಳುವ ದಿನ. ಈಗ ಬ್ರಾಡ್‌ಬ್ಯಾಂಡ್ ಕ್ಷೇತ್ರ ಪ್ರವೇಶಿಸಿರುವ ‘ಜಿಯೊ’ ಕಂಪನಿ, ‘ನಾವು ಮನೆಗಳಲ್ಲಿಯೇ ಸಿನಿಮಾಗಳನ್ನು ರಿಲೀಸ್ ಮಾಡುತ್ತೇವೆ’ ಎನ್ನುತ್ತಿದೆ. ‘ಫಸ್ಟ್ ಡೇ ಫಸ್ಟ್ ಶೋ’ ಎನ್ನುವ ಈ ಚಿಂತನೆ ಮನರಂಜನಾ ಕ್ಷೇತ್ರದ ದಿಕ್ಕುದೆಸೆಯನ್ನೇ ಬದಲಿಸುವ ಸಾಧ್ಯತೆಯಿದೆ. ಮನೆಗಳಲ್ಲಿಯೇ ಸಿನಿಮಾಗಳು ತೆರೆಕಾಣುವಂತಾದರೆ ಬಹುತೆರೆಗಳ ಮಲ್ಟಿಪ್ಲೆಕ್ಸ್‌ಗಳ ಪಾಡೇನು? ಚಿತ್ರರಂಗದ ವ್ಯಾಕರಣ ಬದಲಾಗುವ ದಿನಗಳು ಹತ್ತಿರವಾದವೇ?

■ ವಿಜಯ್ ಜೋಷಿ